# ಸಾನಿಯಾ ಎಂಬ ಮಿಂಚು

■ ಪ್ರವೀಣ ಕುಲಕರ್ಣಿ



ಭಾರತದ ಮಹಿಳಾ ಟೆನಿಸ್‌ನ ಅಗ್ರಮಾನ್ಯ ತಾರೆ ಸಾನಿಯಾ ಮಿರ್ಜಾ, ಪ್ರಸಕ್ತ ಋತು ಮುಗಿದ ಮೇಲೆ ಮತ್ತೆ ಅಂಕಣಕ್ಕೆ ಇಳಿಯುವುದಿಲ್ಲ ಎಂದು ಪ್ರಕಟಿಸಿದ್ದಾರೆ. ತಮ್ಮ ಆಟದ ಕೌಶಲ ಹಾಗೂ ದೇಹದ ಸೌಂದರ್ಯದಿಂದ ಟೆನಿಸ್ ಅಂಗಳದ ತುಂಬಾ ಮಿಂಚು ಹರಿಸಿದ್ದ ಸಾನಿಯಾ, ರಾಕೆಟ್ ಹಿಡಿದು ಅಖಾಡಕ್ಕೆ ಇಳಿಯುವುದು ಇನ್ನೇನು ನಿಂತುಹೋಗಲಿದೆ. ಅವರ ಆಟದ ಮಿಂಚೂ ಮಾಯವಾಗಲಿದೆ.

ಕ್ರಿಕೆಟ್ ಆಟವನ್ನೇ ಬಹುವಾಗಿ ಅಪ್ಪಿಕೊಂಡಿದ್ದ ಭಾರತದಂತಹ ದೇಶದಲ್ಲಿ, ಅದೂ ಮಹಿಳಾ ಟೆನಿಸ್‌ಗೆ ಅಷ್ಟಾಗಿ ಮಹತ್ವ ಇಲ್ಲದಿದ್ದ ವಾತಾವರಣದಲ್ಲಿ ಸಾನಿಯಾ ಮಾಡಿದ ಸಾಧನೆ ಮಹತ್ತರವಾದುದು. ಆರು ಗ್ರ್ಯಾನ್ ಸ್ಲಾಮ್ ಟ್ರೋಫಿಗಳ (ತಲಾ ಮೂರು ಮಹಿಳಾ ಮತ್ತು ಮಿಶ್ರ ಡಬಲ್ಸ್) ಒಡತಿಯಾದ ಅವರು, ಒಂದೊಮ್ಮೆ ಡಬಲ್ಸ್‌ನ ಅಗ್ರ ಶ್ರೇಯಾಂಕದ ಆಟಗಾರ್ತಿಯಾಗಿಯೂ ಮೆರೆದವರು. ಸಿಂಗಲ್ಸ್‌ನ ಶ್ರೇಯಾಂಕ ಪಟ್ಟಿಯಲ್ಲಿ ಭಾರತದ ಬೇರೆ ಯಾವ ಆಟಗಾರ್ತಿಯೂ ತಲುಪದ ಎತ್ತರವನ್ನು ಮುಟ್ಟಿದವರು.

ಅದು 2004ರ ಕಾಲಘಟ್ಟ. ವೃತ್ತಿಪರ ಟೂರ್ನಿಗಳಲ್ಲಿ ಈ ಹುಡುಗಿ ಸ್ಪರ್ಧಿಸಲು ಶುರುಮಾಡಿದ ಸಮಯ ಅದು. ದೊಡ್ಡ ಮೂಗುತಿ ಧರಿಸಿ, ರಾಕೆಟ್ ಹಿಡಿದು ಅಂಗಳಕ್ಕೆ ಧುಮುಕುತ್ತಿದ್ದ ಆಕೆ, ‘ಮೂಗುತಿ ಸುಂದರಿ ಎಂದೇ ಹೆಸರಾಗಿದ್ದರು. ಟೆನಿಸ್ ಜಗತ್ತಿನ ಅತ್ಯಂತ ಸ್ಫುರದ್ರೂಪಿ ಆಟಗಾರ್ತಿಯರಾದ ಮರಿಯಾ ಶಾರ್ಪೋವಾ, ಅನ್ನಾ ಕೋರ್ನಿಕೋವಾ, ಆನಾ ಐವಾನೊವಿಕ್, ಲಾರಾ ರಾಬ್ಸನ್ ಅವರ ಸಾಲಿನಲ್ಲಿ ಸಾನಿಯಾ ಹೆಸರು ಕೂಡ ಸೇರ್ಪಡೆಯಾಗಿತ್ತು.

ಸೌಂದರ್ಯದಲ್ಲಿ ಮಾತ್ರವಲ್ಲ, ಆಟದ ಕೌಶಲದಿಂದಲೂ ಆಕೆ ಟೆನಿಸ್ ಅಂಗಳದಲ್ಲಿ ಹೆಸರು ಮಾಡಿದ್ದರು. ಸ್ವೆಟ್ಲಾನಾ ಕುನೆತ್ಸೋವಾ, ವೇರಾ ಝೊನಾರೇವಾ, ಮರಿಯನ್ ಬಾರ್ಟೋಲಿ, ಮಾರ್ಟಿನಾ ಹಿಂಗಿಸ್, ದಿನಾರಾ ಸಫಿನಾ ಅವರಂತಹ –ತಮಗಿಂತಲೂ ಅಗ್ರಕ್ರಮಾಂಕದ– ಆಟಗಾರ್ತಿಯರಿಗೂ ಸೋಲಿನ ರುಚಿ ತೋರಿಸಿದ್ದರು. ಕಾರಾ ಬ್ಲಾಕ್, ಮಾರ್ಟಿನಾ ಹಿಂಗಿಸ್ ಜತೆ ಗ್ರ್ಯಾನ್ ಸ್ಲಾಮ್‌ಗಳಲ್ಲಿ ಡಬಲ್ಸ್ ಆಡಿ, ಟೆನಿಸ್‌ಪ್ರಿಯರ ಗಮನ ಸೆಳೆದಿದ್ದರು. ಮಿಶ್ರ ಡಬಲ್ಸ್‌ನಲ್ಲಿ ಮಹೇಶ ಭೂಪತಿ ಜತೆ ಹೆಚ್ಚಿನ ಯಶಸ್ಸು (ಎರಡು ಗ್ರ್ಯಾನ್ ಸ್ಲಾಮ್‌ಗಳು ಈ ಜೋಡಿಗೆ ಒಲಿದಿವೆ) ಕಂಡಿದ್ದರು.

ಹೈದರಾಬಾದ್‌ನ ಈ ಹುಡುಗಿಯ ಬದುಕು ಬಲು ವರ್ಣರಂಜಿತ. ಶಾರ್ಟ್ಸ್ ಮತ್ತು ಟಿ–ಶರ್ಟ್ ಧರಿಸಿ ಟೆನಿಸ್ ಅಂಗಳಕ್ಕೆ ಆಡಲು ಇಳಿದಾಗ ಸಂಪ್ರದಾಯವಾದಿಗಳ ವಿರೋಧವನ್ನೂ ಆಕೆ ಎದುರಿಸಿದ್ದಿದೆ. ಬುರ್ಖಾ ಧರಿಸದೇ ಇರುವುದಕ್ಕೆ ಕೆಲವು ಧಾರ್ಮಿಕ ಮುಖಂಡರು ಆಕೆಯ ಪಾಲಕರನ್ನು ಕರೆಯಿಸಿ ಧಮಕಿ ಹಾಕಿದ್ದೂ ಇದೆ. ಆದರೆ, ಈ ಟೆನಿಸ್ ತಾರೆ ಯಾವುದಕ್ಕೂ ಬಗ್ಗದೆ ನಡೆಸಿದ ಕ್ರೀಡಾಯಾತ್ರೆ ಅನನ್ಯವಾಗಿದೆ. ಅಮ್ಮನಾದ ಬಳಿಕವೂ ಆಟವಾಡಲು ಇಳಿದು ಭೇಷ್ ಎನಿಸಿಕೊಂಡವರು ಆಕೆ. ಕ್ರೀಡಾಕ್ಷೇತ್ರದಲ್ಲಿರುವ ಲಿಂಗ ತಾರತಮ್ಯದ ವಿರುದ್ಧ ಹಲವು ಬಾರಿ ಅವರು ಧ್ವನಿ ಎತ್ತಿದ್ದನ್ನೂ ಮರೆಯುವಂತಿಲ್ಲ.

ಬೇಸ್‌ಲೈನ್ ಆಟಕ್ಕೆ ಹೆಸರಾದ ಸಾನಿಯಾ, ಬಲಶಾಲಿಯಾದ ಗ್ರೌಂಡ್ ಸ್ಟ್ರೋಕ್‌ಗಳಿಂದ ಎದುರಾಳಿಗಳನ್ನು ಕಂಗೆಡಿಸಿದವರು. ಮುಂಗೈ–ಹಿಂಗೈ ಹೊಡೆತಗಳೆರಡಲ್ಲೂ ಮುಂದಿದ್ದ ಆಕೆಗೆ ಚುರುಕಿನ ಪಾದಚಲನೆಯಲ್ಲಿ ಮಾತ್ರ ಜಗತ್ತಿನ ಇತರ ಶ್ರೇಷ್ಠ ಆಟಗಾರ್ತಿಯರನ್ನು ಸರಿಗಟ್ಟಲು ಆಗಿರಲಿಲ್ಲ. ಸಾನಿಯಾ ಅವರ ಟೆನಿಸ್ ಯಾತ್ರೆಯೊಂದಿಗೆ ಹಲವು ವಿವಾದಗಳೂ ಹೆಜ್ಜೆ ಹಾಕಿವೆ. ಪಾಕಿಸ್ತಾನದ ಕ್ರಿಕೆಟ್ ಆಟಗಾರ ಶೋಯಬ್ ಮಲ್ಲಿಕ್ ಅವರನ್ನು ವಿವಾಹ ಆಗಿದ್ದಕ್ಕಾಗಿ ಭಾರತದ ಸಂಪ್ರದಾಯವಾದಿಗಳು ಅವರ ಪ್ರತಿಯೊಂದು ನಡೆಯನ್ನೂ ವಿರೋಧಿಸಿದ್ದಿದೆ. ಭಾರತದ ಪರ ಆಡಲು ಅವಕಾಶ ನೀಡಬಾರದು ಎಂದು ಟೆನಿಸ್ ಸಂಸ್ಥೆಯ ಮೇಲೆ ಒತ್ತಡವನ್ನೂ ಹೇರಿದ್ದಿದೆ.

ಬಾಲಾಕೋಟ್ ಘಟನೆ ನಡೆದಾಗ ಪಾಕ್ ವಿಮಾನವನ್ನು ಅಟ್ಟಿಸಿಕೊಂಡು ಹೋಗಿದ್ದ ವಿಂಗ್ ಕಮಾಂಡರ್ ಅಭಿನಂದನ್ ಅವರು ಪಾಕಿಸ್ತಾನದಿಂದ ವಾಪಸಾದ ಸಂದರ್ಭ ಅದು. ‘ವೆಲ್‌ಕಮ್ ಬ್ಯಾಕ್ ವಿಂಗ್ ಕಮಾಂಡರ್ ಅಭಿನಂದನ್... ನಿಜವಾದ ಅರ್ಥದಲ್ಲಿ ನೀವು ನಮ್ಮ ಹೀರೊ’ ಎಂದು ಸಾನಿಯಾ ಟ್ವೀಟ್ ಮಾಡಿದ್ದರು. ಪಾಕಿಸ್ತಾನದ ಜನತೆಯಿಂದ ತೀವ್ರ ವಿರೋಧ ಎದುರಿಸಿದ್ದರು.

ಭಾರತದ ವಿರುದ್ಧ ಪಾಕಿಸ್ತಾನ ಜಯಿಸಿದಾಗ ಪಾಕ್ ತಂಡವನ್ನು ಅಭಿನಂದಿಸಿ ಅವರೊಮ್ಮೆ ಟ್ವೀಟ್ ಮಾಡಿದ್ದರು. ಅದಕ್ಕೆ ‘ಪಾಕಿಸ್ತಾನದ ಸೊಸೆ’ ಎಂದು ಭಾರತೀಯರಿಂದ ತೀವ್ರ ಆಕ್ರೋಶಕ್ಕೆ ತುತ್ತಾಗಿದ್ದರು. ತೆಲಂಗಾಣ ಸರ್ಕಾರದ ‘ರಾಯಭಾರಿ’ಯಾಗಿದ್ದ ಸಾನಿಯಾಗೆ ಅಲ್ಲಿನ ಸರ್ಕಾರ ₹ 2 ಕೋಟಿ ಸಂಭಾವನೆ ಕೊಟ್ಟಿತ್ತು. ಆ ಹಣಕ್ಕೆ ತೆರಿಗೆ ಕಟ್ಟಿಲ್ಲ ಎನ್ನುವುದೂ ವಿವಾದವಾಗಿತ್ತು. ಆದರೆ, ಇಂತಹ ಎಲ್ಲ ವಿವಾದಗಳಿಂದ ಎದ್ದು ಬರುವ ಛಾತಿ ಅವರಿಗೆ ಸಿದ್ಧಿಸಿದೆ. ಫ್ಯಾಷನ್ ಶೋಗಳಲ್ಲೂ ಆಕೆ ಮಿಂಚು ಹರಿಸಿದ್ದಾರೆ. ‘ಏಸ್ ಅಗೇನ್‌ಸ್ಟ್ ಆಡ್ಸ್’ ಎನ್ನುವುದು ಅವರ ಆತ್ಮಚರಿತ್ರೆ. ವಿವಾದಗಳ ಕುರಿತೂ ಈ ಕೃತಿ ಮಾತನಾಡಿದೆ.

‘ದೇಹವು ಮೊದಲಿನಂತೆ ಆಟಕ್ಕೆ ಒಗ್ಗುತ್ತಿಲ್ಲ. ಹಿಂದಿನಂತೆ ಶಕ್ತಿಯನ್ನು ಒಗ್ಗೂಡಿಸುವುದಕ್ಕೂ ಆಗುವುದಿಲ್ಲ. ನಿವೃತ್ತಿ ಘೋಷಿಸಲು ಕಾರಣಗಳು ಅನೇಕ ಇವೆ. ಗಾಯಗಳಾದರೆ ಚೇತರಿಸಿಕೊಳ್ಳಲು ತುಂಬಾ ಸಮಯ ಹಿಡಿಯುತ್ತದೆ’ ಎಂದು ಸಾನಿಯಾ ಹೇಳಿದ್ದಾರೆ. ದೇಶ ಹೆಮ್ಮೆಪಡುವಂತಹ ಸಾಧನೆ ಮಾಡಿದವರು ಅವರು. ಅವರ ಭವಿಷ್ಯದ ಜೀವನಕ್ಕೆ ಇದೋ ಬೆಸ್ಟ್ ಆಫ್ ಲಕ್ ಹಾರೈಕೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65